


ಮೆಲ್ಬರ್ನ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಆಸ್ಟ್ರೇಲಿಯಾದ ಹೆಸರಾಂತ ಕ್ರಿಕೆಟ್ ತಾರೆ ಬ್ರಾಡ್ಮನ್



ವಿಕ್ಟೋರಿಯಾ ಆರ್ಟ್ ಗ್ಯಾಲರಿಯ ಒಂದು ಚಿತ್ರ

ಆಗ ನೋಡಬೇಕು ಇವರ ಉತ್ಸಾಹ! ತಲೆಮೇಲೆ ದೋಣಿ ಕವುಚಿಕೊಂಡು ತರುಣತರುಣಿಯರು ನದಿಯತ್ತ ಓಡುತ್ತಾರೆ. ರಸ್ತೆಗಳಲ್ಲಿ, ನದೀತೀರದಲ್ಲಿ ದಂಡುದಂಡಾಗಿ ಓಡುವ ಸುಖಕ್ಕೆಂದೇ ಓಡುತ್ತಾರೆ.

ಗ್ರೇಟ್ ಓಶನ್ ರಸ್ತೆ ಮೆಲ್ಬರ್ನಿನ ಪ್ರಮುಖ ಆಕರ್ಷಣೆ. ಸುಮಾರು 200 ಕಿ.ಮೀ.ಗಳ ಈ ರಸ್ತೆಯನ್ನು ಹಾಯುವಾಗ ಎಡಬದಿಗೆ ಸಾಗರ. ಬಲಬದಿಗೆ ರಮಣೀಯ ಪ್ರಕೃತಿ. ಅತ್ಯುನ್ನತ ಹಸಿರು ದಿಬ್ಬಗಳು, ಹಸಿರು ಕಣಿವೆಗಳು, ಪದರ ಪದರ ಪರ್ವತಸಾಲು, ಕತ್ತು ಬಾಗಿಸಿ ಸಮೃದ್ಧವಾಗಿ ಮೇಯುವ ಚೆಲು ಗೋಮಂದೆಗಳು, ಅಲ್ಲಲ್ಲಿ ಚೆಲುವಾದ ಜಲಪಾತಗಳು ಎದುರುಗೊಳ್ಳುತ್ತವೆ. ಇದನ್ನು ದಾಟಿ ಮುಂದಕ್ಕೆ ಸಾಗಿದರೆ ಟ್ವೆಲ್ವ್ ಅಪಾಸ್ಟಲ್ಸ್ ಸೇರುತ್ತೇವೆ. ಇದೊಂದು ಮನೋಹರವಾದ ತಾಣ. ಸಮುದ್ರತೀರದ ಬೃಹತ್ ಬಂಡೆಗಳನ್ನು ಅಲೆಗಳ ರಭಸ ಕೊರೆಕೊರೆದು ನಿಲ್ಲಿಸಿರುವ ರಮ್ಯ ವಿನ್ಯಾಸಗಳು ಗಮನ ಸೆಳೆಯುತ್ತವೆ.

ಇಲ್ಲಿನ ಕ್ರಿಸ್‌ಮಸ್ ಹಿಲ್ಸ್ ಪ್ರದೇಶದಲ್ಲಿ ಶುಗರ್‌ಲೋಫ್ ರಿಸರ್‌ವಾಯರ್ ಉದ್ಯಾನವನವಿದೆ. ಇದು ಕಾಂಗರೂಗಳ ನೆಲೆ. ಅವತ್ತಿನ ತಾಪಮಾನ 8 ಡಿಗ್ರಿ. ಜತೆಗೆ ತುಂತುರು ಚಳಿಮಳೆ. ಕಾಂಗರೂ ಅರಸುತ್ತ ಮುನ್ನಡೆದೆವು. ದೂರದ ಹಸಿರು ಕಣಿವೆಯಲ್ಲಿ ನಾಲ್ಕಾರು ಕಾಂಗರೂಗಳು ಎಗರಾಡುವುದು ಕಂಡಿತು. ಫೋಟೋಗಾಗಿ ಹಿಂದೆ ಓಡಿದೆವು. ನೋಡ ನೋಡುತ್ತಿದ್ದಂತೆ ಮಾಯ. ನಂತರ ಇದ್ದಕ್ಕಿದ್ದಂತೆ ಅದೆಲ್ಲಿಂದಲೋ ಮಂದೆ ಮಂದೆ ಕಾಂಗರೂಗಳು ಕುಣಿಯುತ್ತಾ ಬಂದು ಚೆಲ್ಲಾಪಿಲ್ಲಿಯಾಗಿ ಚೆದುರಿದವು. ಆ ನೆಗೆತದ ನೋಟವೇ ಚೆಂದ! ನಿಂತು ತಿರುಗಿ ಮುದ್ದಾಗಿ ಪಿಳಿಪಿಳಿ ನಮ್ಮತ್ತ ನೋಡುತ್ತ, ಹತ್ತಿರ ಹೋದರೆ ಚಂಗನೆ ನೆಗೆದೋಡುತ್ತ ಪುರಾಣದ ಮಾಯಾ ಜಿಂಕೆಯಂತೆ ನಮ್ಮನ್ನು ಸತಾಯಿಸಿಬಿಟ್ಟವು.

**ಮರೂಂಡ ಪಾರ್ಕ್:** ಇದು ಇನ್ನೊಂದು ರಿಸರ್‌ವಾಯರ್ ಪಾರ್ಕ್. ಈ ಮಾರ್ಗದುದ್ದಕ್ಕೂ ರಮ್ಯ ರಮಣೀಯ ದೃಶ್ಯಗಳು. ಮಳೆಯಿಂದ ತೊಳೆದ ಶುಭ್ರ ಕಾನನ. ಅಲ್ಲಲ್ಲೇ ಹೊನ್ನ ದಿಬ್ಬಗಳು. ಭೂರಮೆ ಚಿನ್ನದ ಸೆರಗು ಹೊದ್ದಂತೆ! ನಾವು ಹೋದದ್ದು ಶರತ್ ಋತುವಾದದ್ದರಿಂದ ಮೇಪಲ್ ಮರಗಳ ಸೊಬಗೇ ಸೊಬಗು.

**ಮತ್ಸ್ಯಾಲಯ:** ಇಲ್ಲಿನ ಸೀಲೈಫ್ ವಿಸ್ತೃತ ಮತ್ಸ್ಯಾಲಯದಲ್ಲಿ ಬಗೆಬಗೆಯ ಸಮುದ್ರಜೀವಿಗಳು ಬಣ್ಣಬಣ್ಣದ ಮುದ್ದು ಮೀನುಗಳಿವೆ. ವಿಶಾಲವಾದ ಗಾಜಿನ ಹಜಾರದಲ್ಲಿ ಹಿಮರಾಶಿಯ ನಡುವೆ ಸಾಲುಗಟ್ಟಿ ಆಟವಾಡುವ ಪೆಂಗ್ವಿನ್‌ಗಳ ಮುದ್ದುಮಾಟ ತುಂಬ ಆಕರ್ಷಕ. ಸಮುದ್ರ ಮಧ್ಯದಲ್ಲಿರುವಂತೆ ಭಾಸವಾಗುವ ವಿಶಾಲ ಗಾಜಿನ ಗುಹೆಯಲ್ಲಿ ನಿಂತಾಗ ನಮ್ಮ ಸುತ್ತ ಡಾಲ್ಫಿನ್‌ಗಳು ಶಾರ್ಕ್‌ಗಳು ತೇಲುತ್ತಾ ಹೋಗುವುದು ರೋಮಾಂಚಕಾರಿ ಅನುಭವ.

**ಬೊಟಾನಿಕ್ ಗಾರ್ಡನ್:** ಇಲ್ಲಿನ ರಾಯಲ್ ಬೊಟಾನಿಕ್ ಗಾರ್ಡನ್ ಬಹಳ ಸುಂದರವಾದ ತೋಟ. ಸರೋವರಗಳು, ಅಪರೂಪದ ಗಿಡಮರಗಳು, ದೋಣಿವಿಹಾರ ಎಲ್ಲ ಇದ್ದರೂ, ನಮ್ಮೂರಿನ ಕೆಂಪು ತೋಟಕ್ಕೆ ಸಾಟಿಯೆನಿಸಲಿಲ್ಲ.

**ಎಂಸಿಜಿ:** ಮೆಲ್ಬರ್ನ್ ಕ್ರಿಕೆಟ್ ಗ್ರೌಂಡ್ ತುಂಬ ಖುಷಿ ಕೊಡುವ ಒಂದು ಸ್ಟೇಡಿಯಂ. ಪ್ರಮುಖ ಸ್ಥಳವೊಂದರಲ್ಲಿ ಪ್ರಸಿದ್ಧ ಆಟಗಾರ ಬ್ರಾಡ್‌ಮನ್ ಜತೆ ಸಚಿನ್ ಇರುವ ದೊಡ್ಡದೊಂದು ಭಾವಚಿತ್ರ ಗಮನ ಸೆಳೆಯುತ್ತದೆ.

ನಮ್ಮ ಕ್ರಿಕೆಟ್ ಆಟದ ಬಗ್ಗೆ ಇಲ್ಲಿನವರಿಗೆ ತುಂಬ ಮೆಚ್ಚುಗೆ. ನಮ್ಮ ಯೋಗ